ಋ) *ಕೇಂದ್ರ ಸರ್ಕಾರದಿಂದ ಕೋರಿರುವ ನೆರವು ಎಷ್ಟು?*

ಋೂ)*ಇದಕ್ಕಾಗಿ ಇದುವರೆಗೂ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಮೊತ್ತವೆಷ್ಟು?*

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಮೃತಪಟ್ಟವರ ಸಂಖ್ಯೆ 71

ಆ) ಮೃತಪಟ್ಟವರ ಹತ್ತಿರದ ವಾರಸುದಾರರಿಗೆ ಈ ಕೆಳಕಂಡಂತೆ ಪರಿಹಾರ ನೀಡಲಾಗಿದೆ.

1.	ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ	- 55.00 ಲಕ್ಷಗಳು
2.	ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ	- 32.00 ಲಕ್ಷಗಳು
	ಒಟ್ಟು	87.00 ಲಕ್ಷಗಳು

ಇ) ಮನೆಗಳನ್ನು ಕಳೆದುಕೊಂಡವರ ಸಂಖ್ಯೆ-41998

ಬೆಳೆ ಕಳೆದುಕೊಂಡ ರೈತರ ಸಂಖ್ಯೆ155080

ಈ) ಜೂನ್-ಜುಲೈ ಪ್ರವಾಹ ಪರಿಹಾರ ಕಾರ್ಯಗಳಿಗಾಗಿ ಸರ್ಕಾರ ದಿನಾಂಕ 23.8.1994ರವರೆಗೆ ರೂ. 10.15 ಕೋಟಿಗಳನ್ನು ಬಿಡುಗಡೆ ಮಾಡಿದ್ದು; ಈ ಪೈಕಿ ರೂ. 1.84 ಕೋಟಿಗಳನ್ನು ಮನೆ ಕುಸಿತಕ್ಕೆ ಪರಿಹಾರವಾಗಿ ನೀಡಲಾಗಿದೆ.

ಉ) ಒಟ್ಟಾರೆ ಮೇಲೆ ಬಿಡುಗಡೆ ಮಾಡಿರುವ ಹಣದ ಪೈಕಿ, ರೂ. 36.42 ಲಕ್ಷಗಳನ್ನು ಬೆಳೆ ಹಾನಿಗೆ ಪರಿಹಾರವಾಗಿ ನೀಡಲಾಗಿದೆ.

ಊ) ನೆರೆ ಹಾವಳಿ ಪರಿಹಾರ ಕಾರ್ಯಗಳಿಗಾಗಿ ಇದುವರೆಗೆ ಒಟ್ಟು ರೂ. 4.00 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

ಋ) ರಾಜ್ಯ ಸರ್ಕಾರವು ದಿನಾಂಕ 26.7.94 ರಂದು ರೂ. 100.00 ಕೋಟಿಗಳ ನೆರವು ಕೋರಿ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದೆ.

ಋೂ) ಕೇಂದ್ರ ಸರ್ಕಾರವು ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ತನ್ನ ವಾರ್ಷಿಕ ವಂತಿಗೆಯಾದ ರೂ. 20.25 ಕೋಟಿಗಳನ್ನು ಹೊರತು ಪಡಿಸಿ ಇನ್ನಾವುದೇ ನೆರವು ನೀಡಿಲ್ಲ. ಆದರೆ, ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ ಮೃತಪಟ್ಟವರ ಹತ್ತಿರದ ವಾರಸುದಾರರಿಗೆ ಪರಿಹಾರ ನೀಡಲು ರೂ. 32.00 ಲಕ್ಷಗಳನ್ನು ನೀಡಲಾಗಿದೆ.

ಭೂ ಮಂಜೂರಾತಿಯ ವಿಚಾರವಾಗಿ ಬೀದರ್ ಜಿಲ್ಲೆಯಲ್ಲಿ ಅಧಿಕಾರಿಗಳ ಮೇಲೆ ಕ್ರಮ

279 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಬೀದರ್ ನಗರದಲ್ಲಿ ಭೂ ಮಂಜೂರಾತಿಯ ಸಂಬಂಧವಾಗಿ ಕಾನೂನು ಉಲ್ಲಂಘನೆ ಮಾಡಿರುವ ಎಷ್ಟು ಜನ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗಿದೆ?

ಆ) ಸದರಿ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಎಷ್ಟು ಸಹಾಯಕ ಆಯುಕ್ತರು ಹಾಗೂ ತಹಶೀಲ್ದಾರ್ರನ್ನು ಅಮಾನತ್ತಿನಲ್ಲಿ ಇಡಲಾಗಿದೆ. (ಅಮಾನತ್ತಿನಲ್ಲಿರುವ ಅಧಿಕಾರಿಗಳ ಹೆಸರು ಮತ್ತು ವಿವರ ಒದಗಿಸುವುದು)

ಇ) ಶಿಸ್ತಿನ ಕ್ರಮಕ್ಕೆ ಒಳಪಟ್ಟಿರುವ ಅಧಿಕಾರಿಗಳ ಮೇಲಿರುವ ಆಪಾದನೆಗಳ ವಿವರಗಳನ್ನು ಒದಗಿಸುವುದು.

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಭೂ ಮಂಜೂರಾತಿ ಕಾಯ್ದೆ ಅಡಿಯಲ್ಲಿ ಯಾವುದೇ ಕಾನೂನು ಉಲ್ಲಂಘನೆ ಪ್ರಕರಣಗಳು ಇರುವುದಿಲ್ಲ. ಆದರೆ, ಭೂ ಸುಧಾರಣೆ ಕಾಯ್ದೆ ಅಡಿಯಲ್ಲಿ ಬೀದರ್ ನಗರದಲ್ಲಿ ಭೂ ಮಂಜೂರಾತಿಗೆ ಸಂಬಂಧಿಸಿದ ಈ ಕೆಳಗೆ ಕಾಣಿಸಿದ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲು ಅವರನ್ನು ಅಮಾನತ್ತಿನಲ್ಲಿ ಇಡಲಾಗಿದೆ.

1) ಸಹಾಯಕ ಆಯುಕ್ತರು, ಬೀದರ್.
2) ತಹಶೀಲ್ದಾರ್, ಬೀದರ್.
3) ಉಪನೊಂದಣಾಧಿಕಾರಿ, ಬೀದರ್.
4) ಕಂದಾಯ ನಿರೀಕ್ಷಕ, ಬೀದರ್.
5) ಗ್ರಾಮಲೆಕ್ಕಿಗರು, ಬೀದರ್.
6) ಎರಡನೆಯ ದರ್ಜೆ ಸಹಾಯಕರು, ಬೀದರ್.

ಆ) 1) ಶ್ರೀ ವೇದಮೂರ್ತಿ ಸಹಾಯಕ ಆಯುಕ್ತರು, ಬೀದರ್.

2) ಶ್ರೀ ಬಾಲಾಜಿಸಿಂಗ್, ತಹಶೀಲ್ದಾರ್, ಬೀದರ್.

ಇ) ಬೀದರ್ ತಾಲ್ಲೂಕಿನ ಗುಲ್ಲರ ಹವೇಲಿ ಗ್ರಾಮಕ್ಕೆ ಸೇರಿದ ಅತಿ ಮಹತ್ವವುಳ್ಳ ಬೆಲೆ ಬಾಳುವ ಸರ್ವೆ ನಂ:49, 50, 36 ಮತ್ತು 51 ಜಮೀನುಗಳನ್ನು ಭೂ ಸುಧಾರಣೆ ಕಾಯ್ದೆ ವಿರುದ್ಧವಾಗಿ ಭೂ ನ್ಯಾಯಮಂಡಳಿ ಮತಿಯಿಂದ ಹಕ್ಕುಪತ್ರ ನೀಡಿ, ಭೂಪರಿವರ್ತನೆಗೆ ಅನುಮತಿ ನೀಡಿರುವುದು.

ನೈಸರ್ಗಿಕ ವಿಕೋಪಕ್ಕಾಗಿ ಕೇಂದ್ರದಿಂದ ಬಂದಿರುವ ಪರಿಹಾರ

278 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚಿನ ನೆರೆ ಹಾವಳಿಯೂ ಸೇರಿದಂತೆ ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಸಂಭವಿಸಿದ ಅತಿವೃಷ್ಟಿ ಅನಾವೃಷ್ಟಿಯಿಂದ ಉಂಟಾದ ಅಂದಾಜು ನಷ್ಟವೆಷ್ಟು? (ಜಿಲ್ಲಾವಾರು ಅಂಕಿ ಅಂಶಗಳನ್ನು ನೀಡುವುದು)

ಆ) ಮೇಲ್ಕಂಡ ಅವಧಿಯಲ್ಲಿ ರಾಜ್ಯ ಸರ್ಕಾರವು ಕೇಂದ್ರಕ್ಕೆ ಎಷ್ಟೆಷ್ಟು ಮೊತ್ತದ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿತ್ತು?

ಇ) ಈ ಅವಧಿಯಲ್ಲಿ ಕೇಂದ್ರದಿಂದ ಬಂದಿರುವ ಪರಿಹಾರದ ಮೊತ್ತವೆಷ್ಟು?

ಈ) ಇದೇ ಅವಧಿಯಲ್ಲಿ ಸರ್ಕಾರ ಖರ್ಚು ಮಾಡಿದ ಹಣದ ಮೊತ್ತವೆಷ್ಟು? (ವರ್ಷವಾರು ಅಂಕಿ ಅಂಶಗಳನ್ನು ಒದಗಿಸುವುದು) ;

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ)

ವರ್ಷ	ಕೋರಿದ್ದ ಮೊತ್ತ (ಕೋಟಿ ರೂ.ಗಳಲ್ಲಿ)
1991-92	194.00
1992-93	200.00
1993-94	200.00
1994-95	100.00
ಒಟ್ಟು	694.00